**OS.No.**39/2024

**ಪಿ ಡಬ್ಲ್ಯೂ: 1**

**ದಿಃ 12.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಕೆ ಎಂ ಡಿ ವಕೀಲರಿಂದ**

ದಾವಾದ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯವರು 1988-89 ರಲ್ಲಿ ದಾಖಲೆಯನ್ನು ಮಾಡಿಕೊಟ್ಟಿದ್ದು ಆ ಪ್ರಕಾರ ನಾನು ಖಾತೆ ಬದಲಾವಣೆ ಮಾಡಿಸಿಕೊಂಡಿರಲಿಲ್ಲ ಈಗ ಖಾತೆ ಬದಲಾವಣೆ ಮಾಡಿಕೊಡುವಂತೆ ಈ ಪ್ರಸ್ತುತ ದಾವೆ ದಾಖಲಿಸಿದ್ದೇನೆ. 1988 ರಲ್ಲಿ ಆದ ದಾಖಲೆಯನ್ನು ಇಟ್ಟು ಕಂದಾಯ ಇಲಾಖೆಗೆ ಖಾತೆ ಬದಲಾವಣೆ ಮಾಡುವಂತೆ ಅರ್ಜಿ ಕೊಟ್ಟಿದ್ದೆ. ಆದರೆ ಅವರು ಖಾತೆ ಬದಲಾವಣೆಯನ್ನು ಮಾಡಿಲ್ಲ. ಕಂದಾಯ ಇಲಾಖೆಯವರು ನನ್ನ ಅರ್ಜಿ ಪ್ರಕಾರ ಖಾತೆ ಬದಲಾವಣೆ ಮಾಡಿಲ್ಲ ಎಂದು ನ್ಯಾಯಾಲಯಕ್ಕೆ ಆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಕಂದಾಯ ಇಲಾಖೆಯವರು ಖಾತೆ ಬದಲಾವಣೆ ಮಾಡದೇ ಇದ್ದಾಗ ಉಪವಿಭಾಗಾಧಿಕಾರಿಗಳಿಗೂ ಸಹ ಅರ್ಜಿ ಸಲ್ಲಿಸಿದ್ದೆ. ಉಪವಿಭಾಗಾಧಿಕಾರಿಗಳಿಂದ ಯಾವುದೇ ಮಾಹಿತಿ ಬಂದಿಲ್ಲ ಹಾಗಾಗಿ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ವಕೀಲರಿಗೆ ದಾವೆ ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೆ. ದಾವೆ ತಯಾರಿಸುವಾಗ ಕೈಬರಹ ಪಹಣಿ, ನೋಂದಣಿ ದಾಖಲೆ, ಮ್ಯುಟೇಶನ್ ಮತ್ತು ತಹಶೀಲ್ದಾರ್ ರವರು ಕೊಟ್ಟ ದಾಖಲೆಯನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೆ. ನಿಪಿ.1 ನನ್ನ ತಂದೆ ಮರಣದ ನಂತರ ಎಲ್ಲಾ ಮಕ್ಕಳಿಗೆ ಜಂಟಿ ಖಾತೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಕೊಟ್ಟ ಅರ್ಜಿಯನ್ನು ಹಾಗೆಯೇ ಇಟ್ಟು ಜಂಟಿ ಖಾತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅರ್ಜಿಯನ್ನು ಹಾಗೆಯೇ ಇಟ್ಟು ಜಂಟಿ ಖಾತೆ ಮಾಡಿರುತ್ತಾರೆ ಎಂದು ನನ್ನ ದಾವೆಯಲ್ಲಿ ಬರೆಸಿದ್ದೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ತಹಶೀಲ್ದಾರ್ ರವರು ಕೊಟ್ಟ ಹಿಂಬರಹ ಇಲ್ಲ ಎಂದರೆ ಸರಿ. ನನ್ನ ತಂದೆಯ ಮರಣದ ನಂತರ ತಹಶೀಲ್ದಾರ್ ರವರು ವಾದಿ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಜಂಟಿ ಖಾತೆ ಮಾಡಿರುವುದು ಸರಿ ಇರುತ್ತದೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ನಾನು ಪಡೆಯಲು ಅರ್ಹ ಅಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯು ನನ್ನ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಜಂಟಿ ಖಾತೆ ಇರುವ ಕಾರಣ ನಾನು ದಾವಾದ ಆಸ್ತಿಗೆ ಸಂಪೂರ್ಣ ಮಾಲೀಕ ಅಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯನ್ನು ದಾಖಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗದೇ ಇದ್ದರು ಸಹ ನಿಪಿ.7 ರ ಆಧಾರದ ಮೇರೆಗೆ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಯ ವಿರುದ್ದ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.